# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 949 |
| ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 13-12-2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಆರ್.ಟಿ.ಓ ಕಛೇರಿಗಳ ದಾಖಲೆಗಳಲ್ಲಿ ತಪ್ಪಾಗಿ ಆರ್.ಟಿ.ಓ ಕಛೇರಿ ಸಿಬ್ಬಂದಿ ನಮೂದು ಮಾಡಿರುವುದನ್ನು ಸರಿಪಡಿಸಲು ಯಾರಿಗೆ ಅಧಿಕಾರ ನೀಡಲಾಗಿದೆ; | ಪ್ರಾದೇಶಿಕ ಸಾರಿಗೆ ಕಛೇರಿಗಳ ದಾಖಲೆಗಳಲ್ಲಿ ತಪ್ಪಾಗಿ ಪ್ರಾದೇಶಿಕ ಸಾರಿಗೆ ಕಛೇರಿಗಳ ಕಛೇರಿ ಸಿಬ್ಬಂದಿ ನಮೂದು ಮಾಡಿರುವುದನ್ನು ಸರಿಪಡಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಾಖಲೆಗಳಲ್ಲಿ ಸರಿಪಡಿಸಲು ಸಾಧ್ಯವಾಗದ ಪಕ್ಷದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕೋರಿಕೆಯ ಮೇರೆಗೆ ಕೇಂದ್ರ ಕಛೇರಿಯಿಂದ ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ) | ಇದರಿಂದ ಸಾಮಾನ್ಯ ವಾಹನ ಮಾಲೀಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಪರಿಹಾರಾತ್ಮಕ ಕ್ರಮಗಳೇನು ; | ಸರ್ಕಾರದ ಗಮನಕ್ಕೆ ಬಂದಿದೆ.<br>ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಈ ಹಿಂದೆ ದಾಖಲೆಗಳಲ್ಲಿನ ಡಾಟಾಗಳನ್ನು ಗಣಕಯಂತ್ರ ತಂತ್ರಾಂಶಕ್ಕೆ ನಮೂದಿಸುವ ಸಮಯದಲ್ಲಿ ಡಾಟಾ ಎಂಟ್ರಿ ಆಪರೇಟರ್ ಗಳು (DEO) ದಾಖಲೆಗಳಲ್ಲಿ ತಪ್ಪಾಗಿ ನಮೂದಿಸಿದ್ದು, ಅಂತಹ ವ್ಯತ್ಯಾಸಗಳನ್ನು ಸರಿಪಡಿಸಲಾಗುತ್ತಿದೆ. |
| ಇ) | ದಾಖಲಾತಿ ಸರಿಪಡಿಸಲು ತೆಗೆದುಕೊಳ್ಳುವ ಸಮಯದವರೆಗೆ ಎಫ್.ಸಿ. ಮಾಡಿಸುವ ಮಾಲೀಕರಿಗೆ ಅನಾವಶ್ಯಕ ದಂಡ ವಿಧಿಸುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮವೇನು ; | ಕೇಂದ್ರ ಮೋಟಾರು ವಾಹನ ನಿಯಮಾವಳಿ, 1989ರಲ್ಲಿ ನಿಗದಿಪಡಿಸಿರುವ ಶುಲ್ಕ ರಚನೆಯನ್ವಯ (Fees Structure) ಅರ್ಹತಾ ಪ್ರಮಾಣ ಪತ್ರ ನವೀಕರಣ ಸಮಯದಲ್ಲಿ ಶುಲ್ಕ ಮತ್ತು ದಂಡವನ್ನು ಪಾವತಿಸಿಕೊಳ್ಳಲಾಗುತ್ತಿದೆ. ದಾಖಲಾತಿ ಸರಿಪಡಿಸಲು ತೆಗೆದುಕೊಳ್ಳುವ ಸಮಯದವರೆಗೆ ಎಫ್.ಸಿ. ಮಾಡಿಸುವ ಮಾಲೀಕರಿಗೆ ತೊಂದರೆಯಾಗದಂತೆ ಕೂಡಲೇ ದಾಖಲಾತಿಗಳಲ್ಲಿನ ವ್ಯತ್ಯಾಸಗಳನ್ನು ಸರಿಪಡಿಸಿ ಅನಾವಶ್ಯಕ ದಂಡವನ್ನು ಪಾವತಿಸುವುದನ್ನು ತಪ್ಪಿಸಲಾಗುತ್ತಿದೆ. |
| ಈ) | ಎಷ್ಟು ಪ್ರಕರಣಗಳು ಜ್ಞಾನಭಾರತಿ ಆರ್.ಟಿ.ಓ ಕಛೇರಿಯಲ್ಲಿ ದಾಖಲಾಗಿ ಕ್ರಮ ಜರುಗಿಸಲಾಗುತ್ತಿದೆ; ವಿವರ ಒದಗಿಸುವುದು ? | ಏಪ್ರಿಲ್-2023 ರಿಂದ ನವೆಂಬರ್-2023 ರವರೆಗೆ 249 ಪ್ರಕರಣಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಜ್ಞಾನಭಾರತಿಯಿಂದ ದಾಖಲಾಗಿದ್ದು, 248 ಪ್ರಕರಣಗಳಲ್ಲಿ ಕ್ರಮ ಜರುಗಿಸಲಾಗಿದೆ. ದಿನಾಂಕ 02-12-2023ರ ನಂತರದ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತ್ರ ಸ್ಪಷ್ಟೀಕರಣ ಇಲ್ಲದ ಪ್ರಯುಕ್ತ ಕ್ರಮ ಜರುಗಿಸುವುದು ಬಾಕಿ ಉಳಿದಿರುತ್ತದೆ. |

ಟಿಡಿ 74 ಟಿಡಿಕ್ಯೂ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.